# ಕಿಲೆಂಜಾರು ಅರಮನೆ ಸರಕಾರಿ ಪ್ರೌಢಶಾಲೆ, ಕುಪ್ಪೆಪದವು ಮಂಗಳೂರು

**ತರಗತಿ : 10 ವಿಷಯ : ವಿಜ್ಞಾನ ಸಂಕಲನಾತ್ಮಕ ಮೌಲ್ಯಮಾಪನ –1 ಅಂಕಗಳು : 80 ಅವಧಿ : 3 ಗಂಟೆ**

---

**I. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ** **8X1 =8**

1. ಮಾನವ ಜಠರದಲ್ಲಿರುವ ಹೆಚ್ಚುವರಿ ಆಮ್ಲದ ಪರಿಣಾಮವನ್ನು ತಟಸ್ಥಗೊಳಿಸುವ ವಸ್ತುವಿನ ಗುಣ________

ಎ) ಆಮ್ಲನಾಶಕ ಬಿ) ಆಮ್ಲಶಾಮಕ ಸಿ) ಸೋಂಕುನಾಶಕ ಡಿ) ನಿರ್ವಣಿಕಾರಕ

2. ಬಾಯಿಯ ಲಾಲಾರಸದಲ್ಲಿರುವ ಕಿಣ್ವ ಮತ್ತು ಅದು ಯಾವ ಪೋಷಕಾಂಶದ ಮೇಲೆ ಕಾರ್ಯ ನಿರ್ವಹಿಸುತ್ತದೆ.________

ಎ) ಲಾಲಾರಸದ ಅಮೈಲೇಸ್ – ಲ್ಯಾಕ್ಟೋಸ್ ಬಿ) ಲಾಲಾರಸದ ಅಮೈಲೇಸ್ – ಪಿಷ್ಟ

ಸಿ) ಮೇದೋಜೀರಕ ಅಮೈಲೇಸ್ – ಪ್ರೋಟಿನ್ ಡಿ) ಅಮೈಲೇಸ್ – ಕೊಬ್ಬಿನಾಮ್ಲ

3. ಸಸ್ಯಗಳಲ್ಲಿ ತೀವ್ರ ಕೋಶ ವಿಭಜನೆ ಹೊಂದುವ ಭಾಗದಲ್ಲಿ ಕಂಡು ಬರುವ ಸಸ್ಯ ಹಾರ್ಮೋನು________

ಎ) ಆಕ್ಸಿನ್ ಬಿ) ಜಿಬ್ಬರಲಿನ್ ಸಿ) ಸೈಟೋಕೈನಿನ್ ಡಿ) ಆಬ್ಸಿಸಿಕ್ ಆಮ್ಲ

4. ವಿದ್ಯುತ್ ರೋಧಶೀಲತೆಯ ಅಂತರಾಷ್ಟ್ರೀಯ ಏಕಮಾನ________

ಎ) $\Omega$ m ಬಿ) $\Omega$ ಸಿ) $\Omega^2$ m ಡಿ) $\Omega$/ m

5. ಕಬ್ಬಿಣದ ಮೊಳೆಗಳನ್ನು ತಾಮ್ರದ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿ, ಸ್ವಲ್ಪ ಸಮಯದ ನಂತರ ನೀಲಿ ದ್ರಾವಣ, ಹಸಿರು ಬಣ್ಣಕ್ಕೆ ತಿರುಗುವುದು. ಇದು ಕೆಳಕಂಡ ಯಾವ ರಾಸಾಯನಿಕ ಸಮೀಕರಣವನ್ನು ಪ್ರತಿನಿಧಿಸುತ್ತದೆ?

ಎ) $Zn + H_2SO_4 \rightarrow ZnSO_4 + H_2$ ಬಿ) $Cu + FeSO_4 \rightarrow CuSO_4 + Fe$

ಸಿ) $Fe + CuSO_4 \rightarrow FeSO_4 + Cu$ ಡಿ) $Fe + H_2SO_4 \rightarrow FeSO_4 + Cu$

6. ಮಾಲಿನ್ಯಕ್ಕೆ ಒಳಗಾದ ಜಲಪರಿಸರ ವ್ಯವಸ್ಥೆಯಲ್ಲಿನ ಈ ಕೆಳಕಂಡ ಆಹಾರ ಸರಪಳಿಯಲ್ಲಿ ಜೈವಿಕ ಸಂವರ್ಧನೆಯಿಂದ ಹೆಚ್ಚು ತೊಂದರೆಗೆ ಒಳಪಡುವ ಜೀವಿ **ಸಿಹಿನೀರು→ ಶೈವಲಗಳು→ ಮಿನುಗಳು→ ಪಕ್ಷಿಗಳು**

ಎ) ಶೈವಲಗಳು ಬಿ) ಮೀನುಗಳು ಸಿ) ಪಕ್ಷಿಗಳು ಡಿ) ಜಲಚರಗಳು

7. ಈ ಕೆಳಕಂಡ ರಾಸಾಯನಿಕ ಸಮೀಕರಣಗಳನ್ನು ಅಧ್ಯಯಿಸಿ ಅಧಿಕ ಕ್ರಿಯಾವರ್ಧನೆಯನ್ನು ಹೊಂದಿರುವ ಧಾತು.

A) $Cu + 2Ag(NO_3)_2 \rightarrow Cu(NO3)_2 + 2Ag$
B) $Pb + Cu(NO_3)_2 \rightarrow Pb(NO_3)_2 + Cu$
C) $Zn + Pb(NO_3)_2 \rightarrow Zn(NO_3)_2 + Pb$

ಎ) Ag ಬಿ) Pb ಸಿ) Cu ಡಿ) Zn

8. ಸಸ್ಯ→ ಜಿಂಕೆ→ಚಿರತೆ→ಹುಲಿ, ಈ ಆಹಾರ ಸರಪಳಿಯಲ್ಲಿ ಸಸ್ಯಗಳಲ್ಲಿ 2000 J ಶಕ್ತಿ ಲಭ್ಯವಿದ್ದರೆ, ಚಿರತೆಗೆ ಲಭ್ಯವಾಗುವ ಶಕ್ತಿಯ ಪ್ರಮಾಣ

ಎ) 2000J ಬಿ) 200 J ಸಿ) 20 J ಡಿ) 2 J

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರಿಸಿರಿ.** **8X1 =8**

9. ಆನೋಡಿಕರಣ ಎಂದರೇನು?
10. ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ, ರೆಫ್ರಿಜನೇಟರ್‌ಗಳ ಉತ್ಪಾದನಾ ಕೇಂದ್ರಗಳಲ್ಲಿ ಅದರ ತಯಾರಿಕೆ ಸಂದರ್ಭದಲ್ಲಿ ಮಾಡಬೇಕಾದ ಬದಲಾವಣೆಯೇನು?
11. ವಿದ್ಯುತ್ ಬಲ್ಬ್‌ನೊಳಗೆ ಸಾಧ್ಯವಾದಷ್ಟು ಕಡಿಮೆ ಕ್ರಿಯಾಶೀಲ ಅನಿಲವನ್ನು ತುಂಬುತ್ತಾರೆ. ಏಕೆ?
12. ಗೃಹಬಳಕೆಯ ವಯರಿಂಗ್‌ನಲ್ಲಿ ಭೂ ಸಂಪರ್ಕ ತಂತಿಯ ಪಾತ್ರವೇನು?
13. ವಿದ್ಯುತ್ ಫ್ಯೂಸ್‌ನಲ್ಲಿ ಬೆಸುಗೆ ಲೋಹ ಬಳಸುತ್ತಾರೆಯೇ ಹೊರತು ತಾಮ್ರದ ತಂತಿಯನ್ನಲ್ಲ. ಏಕೆ?
14. ನಮ್ಮ ದೇಹದ ಹಾರ್ಮೋನ್‌ಗಳನ್ನು ರಾಸಾಯನಿಕ ರಸದೂತಗಳೆನ್ನುವರು. ಕಾರಣ ಕೊಡಿ.
15. ಆಹಾರ ಸರಪಳಿಯಲ್ಲಿ ಸಾಮಾನ್ಯವಾಗಿ ನಾಲ್ಕಗಿಂತ ಹೆಚ್ಚು ಪೋಷಣಾಸ್ತರಗಳು ಇರುವುದಿಲ್ಲ. ಏಕೆ?
16. ಎಣ್ಣೆಯಲ್ಲಿ ಕರಿದ ಆಹಾರ ತಿಂಡಿಗಳಿಗೆ ನೈಟ್ರೋಜನ್ ಅನಿಲವನ್ನು ಹಾಯಿಸುತ್ತಾರೆ. ಏಕೆ?

**III. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **8X2=16**

17. ಬಹಿರುಷ್ಣಕ ಮತ್ತು ಅಂತರುಷ್ಣಕ ಕ್ರಿಯೆಗಳಿಗಿರುವ ವ್ಯತ್ಯಾಸ ನೀಡಿ.
18. ಮಾನವನ ಮೆದುಳಿನ ಅಂದವಾದ ಚಿತ್ರವನ್ನು ಬಿಡಿಸಿ.
19. ಚಿತ್ರದಲ್ಲಿ ಬಾಣದ ಗುರುತಿನಿಂದ ಸೂಚಿಸಿದ ಗೆರೆಗಳ ಲಕ್ಷಣಗಳನ್ನು ತಿಳಿಸಿ.




20. ಉಭಯಧರ್ಮಿ ಆಕ್ಸೈಡ್‌ಗಳು ಎಂದರೇನು? ಉದಾಹರಣೆ ಕೊಡಿ.
21. ಜಲಮಾಲಿನ್ಯವು ಕೆರೆ ಪರಿಸರವ್ಯವಸ್ಥೆಯ ಮೇಲೆ ಉಂಟುಮಾಡುವ ಪರಿಣಾಮಗಳನ್ನು ತಿಳಿಸಿ.

**ಅಥವಾ**

ಮಾಲಿನ್ಯಕಾರಕಗಳು ನೆಲಚರ ಜೀವಿಗಳಲ್ಲಿ ಜೈವಿಕ ಸಂವರ್ಧನೆಗೆ ಕಾರಣವಾಗಬಲ್ಲದು. ಸಮರ್ಥಿಸಿ.

22. ಹೃದಯದ ಅಂದವಾದ ಚಿತ್ರವನ್ನು ಬಿಡಿಸಿ.
23. ಕೆಳಗಿನವುಗಳಿಗೆ ಉದಾಹರಣೆ ಕೊಡಿ. ಎ) ಚಾಕುವಿನಿಂದ ಸುಲಭವಾಗಿ ಕತ್ತರಿಸಬಹುದಾದ ಲೋಹ
ಬಿ) ವಿದ್ಯುತ್‌ವಾಹಕತೆಯನ್ನು ಹೊಂದಿರುವ ಅಲೋಹ
24. ಕ್ಲೋರ್ ಅಲ್ಕಲಿ ಪ್ರಕ್ರಿಯೆಯನ್ನು ವಿವರಿಸಿ.

**ಅಥವಾ**

ಪ್ರಯೋಗಶಾಲೆಯಲ್ಲಿ ಚೆಲುವೆ ಪುಡಿಯ ತಯಾರಿಕೆಯನ್ನು ವಿವರಿಸಿ.

**IV.ಕೆಳಗಿನ ಪ್ರಶ್ನೆಗಳನ್ನು ನಾಲ್ಕು – ಐದು ವಾಕ್ಯಗಳಲ್ಲಿ ಉತ್ತರಿಸಿರಿ** **9X3=27**

25. ಸಾರರಿಕ್ತ ಸಲ್ಫೂರಿಕಾಮ್ಲ ಆಮ್ಲದೊಂದಿಗೆ ಸತುವಿನ ಚೂರುಗಳ ವರ್ತನೆ ಮತ್ತು ಉರಿಸುವಿಕೆಯ ಮೂಲಕ ಹೈಡ್ರೋಜನ್ ಅನಿಲದ ಪರೀಕ್ಷೆ ತೋರಿಸುವ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.
26. ಎ) ಅಯಾನಿಕ ಸಂಯುಕ್ತಗಳ 4 ಗುಣಗಳನ್ನು ತಿಳಿಸಿ. ಬಿ) ಥರ್ಮೈಟ್ ಕ್ರಿಯೆ ಎಂದರೇನು?

**ಅಥವಾ**

ಎ) ಕಾಸುವಿಕೆ ಮತ್ತು ಹುರಿಯುವಿಕೆ ವ್ಯತ್ಯಾಸ ತಿಳಿಸಿ.

ಬಿ) NaCl, $MgCl_2$ನಂತಹ ಸಂಯುಕ್ತಗಳು ಹೆಚ್ಚಿನ ಕರಗುವ ಬಿಂದು ಮತ್ತು ಕುದಿಯುವ ಬಿಂದುವನ್ನು ಹೊಂದಿವೆ. ಏಕೆ?

27. ಮಾನವನ ದೇಹದ ಗ್ಲೂಕೋಸ್ ವಿಭಜನೆಯ ವಿವಿಧ ಪ್ರಕ್ರಿಯೆಗಳ ಹಂತಗಳನ್ನು ಪೂರ್ಣಗೊಳಿಸಿ.

ಎ) ಗ್ಲೂಕೋಸ್ → ಕೋಶದ್ರವ್ಯ ಪೈರುವೇಟ್ → ಆಕ್ಸಿಜನ್ ಉಪಸ್ಥಿತಿ [ ]

ಬಿ) ಗ್ಲೂಕೋಸ್ → ಕೋಶದ್ರವ್ಯ ಪೈರುವೇಟ್ → ಆಕ್ಸಿಜನ್ ಕೊರತೆ [ ]

ಸಿ) ಗ್ಲೂಕೋಸ್ → ಕೋಶದ್ರವ್ಯ ಪೈರುವೇಟ್ → ಆಕ್ಸಿಜನ್ ಅನುಪಸ್ಥಿತಿ [ ]

28. ಎ) A,B,C,D ಗಳು ನಾಲ್ಕು ದ್ರಾವಣಗಳಾಗಿದ್ದು, ಕ್ರಮವಾಗಿ $P^H$ 4, 7, 1, 11 ಹೊಂದಿದೆ. ಇವುಗಳನ್ನು ಸಾರ್ವತ್ರಿಕ ಸೂಚಕದಿಂದ ಪರೀಕ್ಷಿಸಿದಾಗ ಯಾವ ಗುಣವನ್ನು ಹೊಂದಿರುತ್ತದೆ?

ಎ) ತಟಸ್ಥ ಬಿ) ಪ್ರಬಲ ಆಮ್ಲೀಯ ಸಿ) ದುರ್ಬಲ ಆಮ್ಲೀಯ ಡಿ) ದುರ್ಬಲ ಪ್ರತ್ಯಾಮ್ಲೀಯ

ಬಿ) P.O.P ಮತ್ತು ಜಿಪ್ಸಂನ ರಾಸಾಯನಿಕ ಅಣುಸೂತ್ರ ತಿಳಿಸಿ.

29. ಕಾರಣ ಕೊಡಿ. ಎ) ಅಯೋಡಿನ್‌ಯುಕ್ತ ಉಪ್ಪಿನ ಬಳಕೆ ಮಾಡಬೇಕು.
ಬಿ) ಮಧುಮೇಹ ರೋಗಿಗಳಿಗೆ ಇನ್ಸುಲಿನ್ ಚುಚ್ಚುಮದ್ದನ್ನು ನೀಡುತ್ತಾರೆ.
ಸಿ) ಕುಡುಕನು ರಸ್ತೆಯಲ್ಲಿ ವಾಹನವನ್ನು ಅಡ್ಡಾದಿಡ್ಡಿಯಾಗಿ ಚಲಾಯಿಸುತ್ತಾನೆ.

30. ಎ) ಆಹಾರ ಜಾಲ ಎಂದರೇನು? ಪರಿಸರ ವ್ಯವಸ್ಥೆಯಲ್ಲಿ ಆಹಾರ ಜಾಲದ ಪ್ರಾಮುಖ್ಯತೆಯೇನು?
ಬಿ) ಪರಿಸರ ವ್ಯವಸ್ಥೆಯಲ್ಲಿ ವಿಘಟಕಗಳ ಪಾತ್ರ ಹಿರಿದಾಗಿದೆ. ಹೇಗೆ?

**ಅಥವಾ**

ಎ) ಆಹಾರ ಸರಪಳಿ ಎಂದರೇನು? ಪರಿಸರ ವ್ಯವಸ್ಥೆಯಲ್ಲಿ ಆಹಾರ ಸರಪಳಿಯ ಪ್ರಾಮುಖ್ಯತೆಯೇನು?
ಬಿ) ಪರಿಸರ ವ್ಯವಸ್ಥೆಯಲ್ಲಿ ಶಕ್ತಿಯ ಹರಿವು ಏಕಮುಖವಾಗಿರುತ್ತದೆ- ಸಮರ್ಥಿಸಿ.

31. ವಿದ್ಯುತ್ ಮೋಟಾರ್‌ನ ಅಂದವಾದ ಚಿತ್ರವನ್ನು ಬಿಡಿಸಿ, ಭಾಗಗಳನ್ನು ಹೆಸರಿಸಿ.

32. ಎ) ರೆಡಾಕ್ಸ್ ಕ್ರಿಯೆಗಳು ಎಂದರೇನು? ಉದಾಹರಣೆ ಕೊಡಿ.
ಬಿ) ಕಾಲ್ಸಿಯಂ ಕಾರ್ಬೋನೇಟ್‌ನ್ನು ವಿಭಜನಾ ಕ್ರಿಯೆಗೆ ಒಳಪಡಿಸಿದಾಗ ಬರುವ ಉತ್ಪನ್ನದ ಉಪಯೋಗವೇನು?

**ಅಥವಾ**

ಎ) ಈ ಕೆಳಗಿನವುಗಳಿಗೆ ಸರಿದೂಗಿಸಿದ ರಾಸಾಯನಿಕ ಸಮೀಕರಣ ಬರೆಯಿರಿ.
A) ಸೋಡಿಯಂನ್ನು ನೀರಿಗೆ ಹಾಕಿದಾಗ
B) ಮೆಗ್ನೇಷಿಯಂ ತಂತಿಯನ್ನು ಉರಿಸಿದಾಗ

ಬಿ) A, B, C ಎಂಬ ಮೂರು ಪ್ರನಾಳಗಳಲ್ಲಿ ಅನುಕ್ರಮವಾಗಿ ಮೆಗ್ನೇಸಿಯಂ, ಸತು, ತಾಮ್ರಗಳನ್ನು ತೆಗೆದುಕೊಂಡು ಪ್ರತಿಯೊಂದಕ್ಕೂ ತಲಾ 5ml. ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲವನ್ನು ಹಾಕಿದಾಗ ಯಾವ ಪ್ರನಾಳದಲ್ಲಿ ಹೈಡ್ರೋಜನ್ ಅನಿಲ ಬೇಗ ಬಿಡುಗಡೆಯಾಗುತ್ತದೆ? ಏಕೆ?

33. ಎ) ಓಮನ ನಿಯಮವನ್ನು ತಿಳಿಸಿ.
ಬಿ) 250W ಟಿ.ವಿ. 1 ಗಂಟೆ ಅಥವಾ 1200W ಟೋಸ್ಟರ್ 10 ನಿಮಿಷಗಳವರೆಗೆ ಬಳಸಿದರೆ ಯಾವುದರಲ್ಲಿ ಅತೀ ಹೆಚ್ಚು ಶಕ್ತಿ ಬಳಕೆಯಾಗುತ್ತದೆ?

**ಅಥವಾ**

ಎ) ಜೌಲನ ಉಷ್ಣೋತ್ಪಾದನಾ ನಿಯಮ ತಿಳಿಸಿ.
ಬಿ) ಒಂದು 40V ಬಲ್ಬ್ ಮತ್ತು 1200V ಟೋಸ್ಟರ್ ಇವುಗಳನ್ನು ಸರಣಿಯಲ್ಲಿ ಜೋಡಿಸುವುದು ಪ್ರಾಯೋಗಿಕವಾಗಿ ಸೂಕ್ತವಲ್ಲ. ಏಕೆ?

**V.ಕೆಳಗಿನ ಪ್ರಶ್ನೆಗಳಿಗೆ ಆರು- ಏಳು ವಾಕ್ಯಗಳಲ್ಲಿ ಉತ್ತರಿಸಿರಿ. 4X4=16**

34. ಎ) ಪತ್ರರಂಧ್ರಗಳ ತೆರೆಯುವಿಕೆ, ಮುಚ್ಚುವಿಕೆಗೆ ಕಾವಲುಕೋಶಗಳು ಹೇಗೆ ಕಾರಣವಾಗಿವೆ?
ಬಿ) ದ್ಯುತಿಸಂಶ್ಲೇಷಣೆ ಕ್ರಿಯೆಯಲ್ಲಿ ನಡೆಯುವ ವಿವಿಧ ಹಂತಗಳನ್ನು ತಿಳಿಸಿ.

**ಅಥವಾ**

ಎ) ಮರುಭೂಮಿ ಸಸ್ಯಗಳಲ್ಲಿ ದ್ಯುತಿ ಸಂಶ್ಲೇಷಣೆ ಪ್ರಕ್ರಿಯೆಯನ್ನು ತಿಳಿಸಿ.
ಬಿ) ಸಸ್ಯಗಳಲ್ಲಿ ನೀರು ಮತ್ತು ಖನಿಜಗಳ ಸಾಗಾಣಿಕೆ ಹೇಗೆ ನಡೆಯುತ್ತದೆ?

35. ಅವಾಹಕ ಹೊದಿಕೆಯಿರುವ ಒಂದು ತಾಮ್ರದ ತಂತಿಯ ಸುರುಳಿ ಮತ್ತು ಗಾಲ್ವನೋಮೀಟರ್‌ಗೆ ಸಂಪರ್ಕಿಸಲಾಗಿದೆ. ಒಂದು ದಂಡಕಾಂತವನ್ನು ಈ ಕೆಳಕಂಡ ಸಂದರ್ಭಗಳಲ್ಲಿ ಪ್ರಯೋಗಿಸಿದಾಗ ಉಂಟಾಗುವ ಫಲಿತಾಂಶವನ್ನು ವಿಶ್ಲೇಷಿಸಿ.
ಎ) ಸುರುಳಿಯ ಒಳಗೆ ತಳ್ಳಿದಾಗ ಬಿ) ಸುರುಳಿಯ ಒಳಗಿನಿಂದ ಹಿಂತೆಗೆದುಕೊಂಡಾಗ
ಸಿ) ಸುರುಳಿಯ ಒಳಗೆ ನಿಶ್ಚಲವಾಗಿ ಇರಿಸಿದಾಗ ಡಿ) ಸುರುಳಿಯ ಸಂಖ್ಯೆಯನ್ನು ಹೆಚ್ಚಿಸಿ ಒಳಗೆ ತಳ್ಳಿದಾಗ

36. ವ್ಯತ್ಯಾಸ ತಿಳಿಸಿ. ಎ) ಕೇಂದ್ರ ನರವ್ಯೂಹ ಮತ್ತು ಪರಿಧಿ ನರವ್ಯೂಹ
ಬಿ) ನಿರ್ನಾಳ ಗ್ರಂಥಿ ಮತ್ತು ನಾಳ ಗ್ರಂಥಿ

37. ಎ) ಗೃಹ ಬಳಕೆಯ ವಿದ್ಯುತ್ ಮಂಡಲಗಳ ಜೋಡಣೆಯಲ್ಲಿ ಫ್ಯೂಸ್ ಬಳಸುವುದು ಒಳ್ಳೆಯದು. ಏಕೆ?
ಬಿ) ಮೂರು ರೋಧಕಗಳನ್ನು ಬಳಸಿ ಸರಣಿ ಮತ್ತು ಸಮಾಂತರ ಕ್ರಮದಲ್ಲಿ ವಿದ್ಯುನ್ಮಂಡಲವನ್ನು ರಚಿಸಿ.

**VI. ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ. 1X5=5**

38. ಎ) ಪರಿಸರದಲ್ಲಿ ಜೈವಿಕ ವಿಘಟನೀಯ ಮತ್ತು ಜೈವಿಕ ವಿಘಟನೀಯವಲ್ಲದ ತ್ಯಾಜ್ಯ ಬೇರ್ಪಡಿಸುವುದು ಮತ್ತು ವಿಲೇವಾರಿ ಮಾಡುವುದು ಒಳ್ಳೆಯದು. ಸಮರ್ಥಿಸಿ.
ಬಿ) ದೈನಂದಿನ ಜೀವನದಲ್ಲಿ ವಿದ್ಯುತ್ ಉಳಿತಾಯ ಮಾಡುವ ಕ್ರಮಗಳನ್ನು ತಿಳಿಸಿ.